# ಪೂನಂ ಸೋನಿ ವಿನ್ಯಾಸಗೊಳಿಸಿರುವ ಪ್ಲಾಟಿನಂ ದಿನದ ಪ್ರೀತಿಯ ವಿಶಿಷ್ಟವಾದ ಬಹುಮಾನವನ್ನು ಪರಿಚಯಿಸಲಾಗುತ್ತಿದೆ.



ಪ್ರೀತಿಯ ಪ್ಲಾಟಿನಂ ದಿನ ಅತ್ಯಂತ ಆತ್ಮೀಯವಾದ ದಿನ ಅದು ಪ್ರೀತಿಯ ಪಯಣದಲ್ಲಿ ಒಂದು ಅವಿಸ್ಮರಣೀಯ ದಿನ ಕೂಡ ಆಗಿದೆ. ನೀವು ಪ್ರೀತಿಯಲ್ಲಿ ಮಿಳಿತವಾಗಿರುವುದರಿಂದ ಸಂತಸದ ಪರಾಕಾಷ್ಠೆ ಮತ್ತು ವೈಯುಕ್ತಿಕ ಸಂತೃಪ್ತಿಯ ಉತ್ತುಂಗಕ್ಕೇರಿದ ದಿನವೇ ಪ್ರೀತಿಯ ಪ್ಲಾಟಿನಂ ದಿನ. ಪರಸ್ಪರ ನೈಜ ಆತ್ಮೀಯ ಅನುಭಾವ ಪಡೆದ ದಿನ ಇದು. ಇಂತಹ ಅವಿಸ್ಮರಣೀಯ ಸಮಯವು ಅಪೂರ್ವವಾದ ಮತ್ತು ಅಮೂಲ್ಯವಾದ ಪ್ಲಾಟಿನಂನಿಂದ ಗೌರವಿಸಿ ಸಂಭ್ರಮಿಸುವುದು ಸೂಕ್ತ ಹಾಗೂ ಸಮ್ಮತ.

ಪೂನಂ ಸೋನಿ, ಇವರು ಅಮೂಲ್ಯ ಆಭರಣಗಳ ಅಗಣಿತ ಸಂಗ್ರಹಣೆಗೆ ಪ್ರಸಿದ್ಧಿ ಪಡೆದಿದ್ದಾರೆ. ಅವರ ಸಂಗ್ರಹಣೆಯಲ್ಲಿರುವ ಆಭರಣಗಳು ವಿಶ್ವದಾದ್ಯಂತ ಗಮನಸೆಳೆದಿವೆ. ಇವರು ಎಕೊ ಆರ್ಟ್ ಪರೇಡ್ 2010ರ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ವಿಶ್ವದ 32 ಆಯ್ದ ಆಭರಣಗಳ ಬ್ರಾಂಡ್‌ಗಳೊಡನೆ ಈ ಪರೇಡ್‌ನಲ್ಲಿ ಪಾಲ್ಗೊಂಡಿದ್ದರು. ಇವುಗಳನ್ನು ಸೊತೆಬೈನ ಲಾರ್ಡ್ ಮಾರ್ಕ್ ಪೋಲ್ಟಿಮೋರ್ ಇವರು ಹರಾಜು ಮಾಡಿದ್ದರೆಂಬುದು ಮಹತ್ವದ ಅಂಶವಾಗಿದೆ. ಪ್ರೀತಿಯ ಪ್ಲಾಟಿನಂ ದಿನದ ಸ್ವರ್ದೆಯ ಮಹಾ ಆಕರ್ಷಣೆಯ  ಆಭರಣದ ವಿನ್ಯಾಸದ ಹಿಂದಿರುವ ಸ್ಫೂರ್ತಿಯ ಬಗ್ಗೆ ಇವರು ಮಾತನಾಡುವರು.



**ನೀವು ಪ್ಲಾಟಿನಂ ಅನ್ನು ನಿಮ್ಮ ಕಾರ್ಯಕ್ಷೇತ್ರದ ವಸ್ತುವನ್ನಾಗಿ ಆಯ್ಕೆ ಮಾಡಲು ಕಾರಣವೇನು ?**

ಒಬ್ಬ ವಿನ್ಯಾಸಕಿಯಾಗಿರುವ ನಾನು ವಿನೂತನವಾದುದನ್ನು ಸೃಷ್ಟಿಸಬೇಕೆಂಬ ಅಪೇಕ್ಷೆ ಹೊಂದಿದ್ದೆ. ಹಾಗಾಗಿ ಸರಿಸಾಟಿ ಮತ್ತೊಂದಿಲ್ಲದ ಆಭರಣಗಳನ್ನು ವಿನ್ಯಾಸಗೊಳಿಸಿದೆ. ಅದಕ್ಕೆ ಪ್ಲಾಟಿನಂ ಸರಿಯಾದ ಅಂಶವೆಂಬ ನಿರ್ಧಾರ ನನ್ನದಾಗಿತ್ತು. ಏಕೆಂದರೆ ಪ್ಲಾಟಿನಂ ಅಪೂರ್ವ ಮತ್ತು ಅಮೂಲ್ಯವಾದುದು, ಇಷ್ಟೇ ಅಲ್ಲ, ನನ್ನ ಭಾವನೆಯ ಪ್ರಕಾರ ಪ್ಲಾಟಿನಂನ ಹಾಗೆ ಪ್ರೀತಿಯನ್ನು ಪ್ರತಿನಿಧಿಸುವ ವಸ್ತು ಬೇರೊಂದಿಲ್ಲ. ವಾಸ್ತವಿಕ ವಿಚಾರ ಹೀಗಿರುವಾಗ ಪ್ರೀತಿಯ ಪ್ಲಾಟಿನಂ ದಿನದ ಸ್ಪರ್ಧೆಗೆ ಅಪಾರ ಆಕರ್ಷಣೆಯ ಆಭರಣ ವಿನ್ಯಾಸ ಮಾಡಿಕೊಡಬೇಕೆಂದು ಪ್ಲಾಟಿನಂ ಗಿಲ್ಡ್ ಇಂಡಿಯಾ ನನ್ನನ್ನು ಭೇಟಿ ಮಾಡಿದಾಗ ನನಗೆ ರೋಮಾಂಚನವಾಯಿತು. ಇದೊಂದು ಸುಂದರವಾದ ಆಲೋಚನೆ ಜನರು ತಮ್ಮ ಪ್ರೀತಿಯ ಕಥಾನಕವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಮತ್ತು ತಮ್ಮ ಅಚ್ಚುಮೆಚ್ಚಿನದನ್ನು ಆಯ್ಕೆ ಮಾಡಿಕೊಳ್ಳಲು ಸೂಕ್ತವಾದ ನಮೂನೆ ಕೂಡ ಆಗಿದೆ ಎಂಬ ಕಾರಣದಿಂದ ಪ್ಲಾಟಿನಂ ಬಗ್ಗೆ ವಿನ್ಯಾಸ ಮಾಡಲು ನಾನು ಆಯ್ಕೆ ಮಾಡಿಕೊಂಡಿರುವೆ.

**ಈ ವಿನ್ಯಾಸ ರೂಪಿಸಲು ನಿಮಗೆ ಸ್ಫೂರ್ತಿ ಯಾವುದು?**

ಪ್ರೀತಿಯ ಪ್ಲಾಟಿನಂ ದಿನವು ಅವಿಸ್ಮರಣೀಯವಾದ ದಿನ. ದಂಪತಿಗಳ ಪರಸ್ಪರ ಪ್ರೀತಿಯು ಉಚ್ಛ್ರಾಯ ಮಟ್ಟಕ್ಕೆ ತಲುಪುವ ದಿನವದು. ಆ ಲೋಹದ ಅಪೂರ್ವತೆ ಮತ್ತು ಪ್ರೀತಿಯಲ್ಲಿ ಅದರ ಪಾತ್ರ ಹಾಗೂ ಅದರಿಂದ ಮೂಡುವ ಸಂಸ್ಮರಣೆಯ ಅಂಶವು ನನಗೆ ಅತ್ಯುನ್ನತ ಸ್ಫೂರ್ತಿ ಉಂಟುಮಾಡಿತು. ಪ್ಲಾಟಿನಂ ಸೊಗಸಾದುದು ಮತ್ತು ಶಾಶ್ವತವಾದುದು. ಬೇರೆಯ ಲೋಹಗಳಿಗೆ ಅನೇಕ ಬೇರೆಯ ಲೋಹಗಳ ಅಂಶಗಳ ಮಿಶ್ರಣಬೇಕಾಗುತ್ತದೆ. ಆದರೆ ಪ್ಲಾಟಿನಂಗೆ ಅಷ್ಟೇನು ಬೇಕಾಗದು ಲೋಹದ ಸಮನ್ವಯ ಸಮ್ಮಿಲನಕ್ಕಾಗಿ ನಾನು ಟ್ಯಾನ್‌ಜನೈಟ್ ಮತ್ತು ವಜ್ರವನ್ನು ಆಯ್ಕೆ ಮಾಡಿದ್ದೇನೆ. ಈ ವಿನ್ಯಾಸಕ್ಕೆ ಸ್ಫೂರ್ತಿಯ ಮತ್ತೊಂದು ಕೇಂದ್ರ ಬಿಂದು ಶಿಲುಬೆ ಎಣಿಗೆ, ಇದು ಆಧ್ಯಾತ್ಮಿಕ ಮತ್ತು ಬಿಡಿಸಲಾಗದ ಅನುಬಂಧದ ಸಂಕೇತವೂ ಆಗಿದೆ ಈ ಸಂಕೇತದ ಆಧ್ಯಾತ್ಮಿಕ ಅರ್ಥವು ಶಾಶ್ವತವಾದ ಅನುಬಂಧವನ್ನು ಸೂಚಿಸುವುದಾಗಿದೆ.

**ನಿಮ್ಮ ಈ ವಿವರಣೆ ಬಹಳ ಕುತೂಹಲಕಾರಿಯಾದುದಾಗಿದೆ. ಈ ವಿಶೇಷ ಆಭರಣದ ವಿಚಾರವಾಗಿ ಇನ್ನೂ ಹೆಚ್ಚಿನ ವಿವರ ನೀಡುವಿರಾ?**

ನಾನು ಸ್ವತಃ ದಂಪತಿಗಳ ವಾಸಸ್ಥಳಕ್ಕೆ ಭೇಟಿ ನೀಡಿ, ಅಲ್ಲಿ ವಿಚಾರ ಮಂಥನ ಮಾಡುತ್ತಿರುವಾಗ ಅಮೂಲ್ಯವಾದ ಈ ಆಭರಣದ ಕಲ್ಪನೆ ಮೂಡಿತು. ಮಹಿಳೆಯರಿಗೆ ರೂಪಿಸಿದ ಈ ಆಭರಣದ ವಿನ್ಯಾಸವು ಪೆಂಡೆಂಟ್ ಮತ್ತು ಚೈನ್ ಒಳಗೊಂಡಿರುವುದು. ಪೆಂಡೆಂಟ್‌ನ ನಡು ಮಧ್ಯದಲ್ಲಿ ಮುತ್ತನ್ನು ಅಳವಡಿಸಲಾಗಿದೆ. ಇದನ್ನು ಪ್ಲಾಟಿನಂ ಅನ್ನು ಹಿಡಿದಿಟ್ಟುಕೊಳ್ಳುವ ಅಲಂಕಾರಿಕ ಟುಲಿಪ್ ಪುಷ್ಪದಳಗಳೊಡನೆ ಸೇರಿಸಿ ಎಣೆಯಲಾಗಿದೆ. ಟುಲಿಪ್ಸ್ ಪುಷ್ಪ ನಿಶ್ಕಳಂಕ ಪ್ರೀತಿಯನ್ನು ಸಂಕೇತಿಸುವುದರಿಂದ ಅದನ್ನು ವಿನ್ಯಾಸಗೊಳಿಸಿ ಅದರ ಹಿಂಭಾಗದಲ್ಲಿ ಪ್ರೀತಿಯ ಸಂದೇಶವನ್ನು ತಲುಪಿಸುವ ಪಾರಿವಾಳಗಳನ್ನು ಪಡಿ ಮೂಡಿಸಲಾಗಿದೆ. ಈ ವಿನ್ಯಾಸ ಹೇಗಿದೆ ಎಂದರೆ ಮಹಿಳೆಯು ಅದನ್ನು ವಿಶೇಷ ಸಂದರ್ಭಗಳಲ್ಲಿ ಧರಿಸಬಹುದಾಗಿದೆ. ಬೇಕೆಂದಾಗ ಮುಖ್ಯ ಪೆಂಡೆಂಟ್‌ನ್ನು ಕಳಚಿ ಬರಿ ಚೈನನ್ನೆ ಹಾಕಿಕೊಳ್ಳಬಹುದು. ಬರಿ ಚೈನನ್ನೇ ಹಾಕಿಕೊಳ್ಳುವಾಗ ಚೈನಿನ ಭಾಗ ಎದೆಯ ಮೇಲೆ ಬರುವಂತೆ ಮತ್ತು ಕೊಂಡಿಯ ಭಾಗ ಕತ್ತಿನ ಹಿಂದಕ್ಕೆ ಬರುವಂತೆ ಮಾಡಿ ಪ್ರತಿದಿನ ಧರಿಸಲು ಸೂಕ್ತವಾಗಿ ಮಾರ್ಪಡಿಕೊಳ್ಳಬಹುದು. ಪುರುಷರಿಗೂ ಸಹ ನಾನು ಬ್ರೇಸ್‌ಲೆಟ್ ವಿನ್ಯಾಸಗೊಳಿಸಿದ್ದೇನೆ ಇದು ಆಭರಣದ ನಿರಾಯಾಸ ಐಟಂ ಆಗಿ ಗೋಚರಿಸುವುದು. ಪುರುಷರಿಗಾಗಿ ರೂಪಿಸಿರುವುದಾದರೂ ಅದರ ಸೊಬಗು ಚಿತ್ತಾಕರ್ಷಕ. ಇದು ವಜ್ರದ ಸ್ಪರ್ಶವನ್ನು ಒಳಗೊಂಡಿದ್ದು ಕೈಗಾರಿಕಾ ಸಂಪರ್ಕಹೊಂದಿದೆ. ಇದನ್ನು ಮಹಿಳೆಯ ಆಭರಣದ ಜೊತೆ ಸಮನ್ವಯಗೊಳಿಸಲು ಶಿಲುಬೆಯಾಕಾರದ ಎಣಿಗೆಯನ್ನು ಪಕ್ಕದಲ್ಲಿ ಕೂಡಿಸುವಿಕೆಯಾಗಿ ಅಣಿಗೊಳಿಸದ್ದೇನೆ.



ನಿಮ್ಮ ಪ್ರೀತಿಯ ಪ್ಲಾಟಿನಂ ದಿನದ ಕಥಾನಕವನ್ನು ಫೇಸ್‌ಬುಕ್‌ಗೆ ಕಳುಹಿಸಿ ಮತ್ತು ಪೆಂಡಂಟ್ ಮತ್ತು ಬ್ರೇಸ್‌ಲೆಟ್ ಗೆಲ್ಲಬಹುದು. ಅಮೂಲ್ಯವಾದ ಮತ್ತು ಅಪೂರ್ವವಾದ ಪ್ಲಾಟಿನಂ ಆಭರಣವನ್ನು ಭಾರತದ ವೈಭವೋಪೇತ ಆಭರಣ ವಿನ್ಯಾಸಕಾರರಾದ ಪೂನಮ್ ಸೋನಿ ರೂಪಿಸಿದ್ದಾರೆ ಮತ್ತು ಪ್ಲಾಟಿನಂನ ಅತ್ಯುತ್ಕೃಷ್ಟ ತಯಾರಕರಾದ ಯೂನಿ-ಡಿಸೈನ್ ಇಂಡಿಯಾ ಇವರು ತಯಾರಿಸಿದ್ದಾರೆ.

ಇಲ್ಲಿಗೆ ಲಾಗಿನ್ ಆಗಿ www.facebook.com /platinumdayoflove ಮತ್ತು ನಿಮ್ಮ ಸ್ನೇಹಿತರು ಮತ್ತು ಪರಿಚಿತರ ಜೊತೆ ನಿಮ್ಮ ಪ್ರೀತಿಯ ಕಥಾನಕವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಿ. ಪ್ಲಾಟಿನಂ ಆಭರಣದ ಈ ಐಟಂ ಅನ್ನು ನಿಮ್ಮದಾಗಿಸಿಕೊಳ್ಳಿ.